ದೂರವಾಣಿ ಸಂಖ್ಯೆ: 080-2774 5057
080-2955 0157
ವೆಬ್‌ಸೈಟ್: www.magadi-pa.in
ಇ-ಮೇಲ್: mpa.magadi@gmail.com

# ಮಾಗಡಿ ಯೋಜನಾ ಪ್ರಾಧಿಕಾರ

**ಕಛೇರಿ: ನಂ. 297/5588, ಬಾಗೇಗೌಡ ಬಡಾವಣೆ, ತಿರುಮಲೆ ರಸ್ತೆ, ಮಾಗಡಿ ಟೌನ್, ರಾಮನಗರ ಜಿಲ್ಲೆ, ಪಿನ್ ಕೋಡ್-562 120**

ಸಂಖ್ಯೆ:ಮಾಯೋಪ್ರಾ/ಪ್ರಾ.ಪ್ರ.ಪತ್ರ/10/2020-21/429 ದಿನಾಂಕ: 22 JAN 2021

## :: ಪ್ರಾರಂಭಿಕ ಪ್ರಮಾಣ ಪತ್ರ ::

ವಿಷಯ: ಬೆಂಗಳೂರು ದಕ್ಷಿಣ ತಾಲ್ಲೂಕು, ತಾವರೆಕೆರೆ ಹೋಬಳಿ, **ಮುದ್ದಯ್ಯನಪಾಳ್ಯ** ಗ್ರಾಮದ ಸ.ನಂ. 28 ರಲ್ಲಿ **ಒಟ್ಟು 58 ಎಕರೆ 13 ಗುಂಟೆ** ವಿಸ್ತೀರ್ಣದ ಜಮೀನಿನಲ್ಲಿ Affordable Housing ಯೋಜನೆ ನಿರ್ಮಾಣ ಸಂಬಂಧ ವಸತಿ ಸಮುಚ್ಚಯ ಕಟ್ಟಡ ಕಟ್ಟಲು ಪ್ರಾಧಿಕಾರದಿಂದ ಪ್ರಾರಂಭಿಕ ಪ್ರಮಾಣ ಪತ್ರವನ್ನು ನೀಡುವ ಬಗ್ಗೆ.

ಉಲ್ಲೇಖ: 1) ತಮ್ಮ ಅರ್ಜಿ ದಿನಾಂಕ: 29-12-2020.
2) ಈ ಕಛೇರಿ ಪತ್ರ ಸಂಖ್ಯೆ:ಮಾಯೋಪ್ರಾ/ಎಲ್ಎಒ/ಅ.ನ/12/2020-21 ದಿನಾಂಕ: 24-12-2020.

*********

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರಲ್ಲಿ ಬೆಂಗಳೂರು ದಕ್ಷಿಣ ತಾಲ್ಲೂಕು, ತಾವರೆಕೆರೆ ಹೋಬಳಿ, **ಮುದ್ದಯ್ಯನಪಾಳ್ಯ** ಗ್ರಾಮದ ಸ.ನಂ. 28 ರಲ್ಲಿ **ಒಟ್ಟು 58 ಎಕರೆ 13 ಗುಂಟೆ** ವಿಸ್ತೀರ್ಣದ ಜಮೀನಿನಲ್ಲಿ Affordable Housing ಯೋಜನೆ ನಿರ್ಮಾಣ ಸಂಬಂಧ ವಸತಿ ಸಮುಚ್ಚಯ ಕಟ್ಟಡ ಕಟ್ಟಲು ಕಟ್ಟಡ ನಕ್ಷೆಗೆ ಅನುಮೋದನೆ ನೀಡುವಂತೆ ಕೋರಲಾಗಿರುತ್ತದೆ. ಪರಿಶೀಲಿಸಲಾಗಿ, ಸದರಿ ಜಮೀನಿಗೆ ಉಲ್ಲೇಖ (2) ರಲ್ಲಿ ವಸತಿ ಸಮುಚ್ಚಯ ಅಭಿವೃದ್ಧಿ ನಕ್ಷೆಗೆ ಅನುಮೋದನೆ ನೀಡಲಾಗಿದೆ. ಈ ಸಂಬಂಧ ಅಗತ್ಯ ಶುಲ್ಕಗಳನ್ನು ಪಾವತಿಸಿಕೊಳ್ಳಲಾಗಿರುತ್ತದೆ.

ಹಾಗಾಗಿ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಸೆಕ್ಷನ್ 15(1)ರನ್ವಯ Affordable Housing ಯೋಜನೆ ನಿರ್ಮಾಣ ಸಂಬಂಧ ವಸತಿ ಸಮುಚ್ಚಯ ಕಟ್ಟಡ ಕಟ್ಟಲು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಪ್ರಾರಂಭಿಕ ಪ್ರಮಾಣ ಪತ್ರ ನೀಡಲಾಗಿದೆ.

### :: ಷರತ್ತುಗಳು ::

1. ದಿನಾಂಕ: 30-01-2020 ರಂದು ಮಾನ್ಯ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಜರುಗಿದ 7 ನೇ ರಾಜ್ಯ ಮಟ್ಟದ "ಧಾರಣೀಯ ವಸತಿ ಗೃಹ" ಅಧಿಕಾರಯುಕ್ತ ಸಮಿತಿ ಸಭೆಯ ನಡಾವಳಿಯಲ್ಲಿ "Local Planning Authorities can Accord conditional Approval for Building Plans and Layout Plans submitted by Rajiv Gandhi housing corporation Limited with the condition that NOCs from concerned Authorities to be obtained before issuing the Completion Certificate" ಎಂದು ತೀರ್ಮಾನಿಸಿದ್ದು, ಅದರಂತೆ, ಪ್ರಶ್ನಿತ ಜಮೀನಿನ ಅಭಿವೃದ್ಧಿ ಕಾಮಗಾರಿಗಳು ಪೂರ್ಣಗೊಳ್ಳುವ ಪೂರ್ವದಲ್ಲಿ ಸಂಬಂಧಪಟ್ಟ ಇಲಾಖೆಗಳಿಂದ ನಿರಾಕ್ಷೇಪಣಾ ಪತ್ರಗಳನ್ನು ಪಡೆದು ಸಲ್ಲಿಸತಕ್ಕದ್ದು.

2. ಮೇಲ್ಕಂಡ ನಿವೇಶನದಲ್ಲಿ ಕಟ್ಟುವ ಕಟ್ಟಡಗಳನ್ನು ಈ ಕಛೇರಿಯಿಂದ ಅನುಮತಿ ನೀಡಿರುವಂತೆ Affordable Housing ಯೋಜನೆ ವಸತಿ ಸಮುಚ್ಚಯ ಕಟ್ಟಡಗಳನ್ನು ಅನುಮೋದಿತ ಕಟ್ಟಡ ನಕ್ಷೆಯಂತೆ ನಿರ್ಮಿಸತಕ್ಕದ್ದು.